# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಹುಬ್ಬಳ್ಳಿಯ ಅಕ್ಕಿಹೊಂಡದ ಸ್ವಯಂಸೇವಕರು ಸೇವಾಸಾಂಘಿಕ್‌ನ ಪ್ರಯುಕ್ತ ಸ್ಥಳೀಯ ಪ್ರಾಚೀನ ಶ್ರೀ ಮಾರುತಿ ದೇವಾಲಯವನ್ನು ಸ್ವಚ್ಛಗೊಳಿಸಿದರು.


ಸಂಪುಟ : 36    ಸಂಚಿಕೆ : 17    ಜಯ–ಮೀನ    ಕಲಿಯುಗಾಬ್ದ 5117    15–4–2015    ತ್ರೈವಾರ್ಷಿಕ : ರೂ. 150.00    ಬಿಡಿ ಪ್ರತಿ : ರೂ. 3.00    ಪುಟಗಳು : 4


# ಭೂ ಸ್ವಾಧೀನ ಮಸೂದೆ : ಏನು – ಎತ್ತ ?

ಭಾರತದಲ್ಲಿ "ಭೂ ಸ್ವಾಧೀನ" ಎಂದರೆ ವಿವಿಧ ಮೂಲಸೌಕರ್ಯ ಮತ್ತು ಅಭಿವೃದ್ಧಿ ಯೋಜನೆಗಳಿಗಾಗಿ ಕೇಂದ್ರ ಅಥವಾ ರಾಜ್ಯ ಸರ್ಕಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ. 2013ರ ವರೆಗೆ ಭೂ ಸ್ವಾಧೀನ ಪ್ರಕ್ರಿಯೆ 1894ರ ಭೂ ಸ್ವಾಧೀನ ಕಾಯ್ದೆಯ ಅನ್ವಯ ನಡೆಯುತ್ತಿತ್ತು. ಜನವರಿ 1, 2014ರಿಂದ The Right to Fair Compensation and Transparency in Land Acquisition, Rehabilitation and Resettlement (Amendment) Bill -2013 (LARR ACT 2013 - ಭೂ ಸ್ವಾಧೀನ, ಪುನರ್ವಸತಿ, ಪುನಃ–ಸ್ಥಾಪನೆಯಲ್ಲಿ ನ್ಯಾಯಯೋಚಿತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಕಾಯ್ದೆ, 2013) ಜಾರಿಗೆ ಬಂತು. ಡಿಸೆಂಬರ್ 1, 2014ರಲ್ಲಿ ಎನ್.ಡಿ.ಎ ಸರ್ಕಾರ ಈ 2013ರ ಕಾಯ್ದೆಯ ಕೆಲವು ನಿಬಂಧನೆಗಳಿಗೆ ತಿದ್ದುಪಡಿ ತರಲು ಸುಗ್ರೀವಾಜ್ಞೆ ಹೊರಡಿಸಿತು. ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅಡಿಯಲ್ಲಿ ಭೂ ಸಂಪನ್ಮೂಲ ಇಲಾಖೆ ಈ ಕಾಯ್ದೆಯನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ಹೊಂದಿರುತ್ತದೆ.

**1894 ಭೂ ಸ್ವಾಧೀನ ಕಾಯ್ದೆಗೂ 2013ರ LARR ACTಗೂ ಇರುವ ಪ್ರಮುಖ ವ್ಯತ್ಯಾಸಗಳು**

| 1894ರ ಭೂ ಸ್ವಾಧೀನ ಕಾಯ್ದೆ | 2013ರ LARR ACT |
|---|---|
| "ಸಾರ್ವಜನಿಕ ಉದ್ದೇಶಕ್ಕೆ" ಎಂಬ ಪದ ಅಸ್ಪಷ್ಟವಾಗಿತ್ತು ಹಾಗೂ ಸರಕಾರದ ವಿವೇಚನೆಗೆ ಸಂಬಂಧಿಸಿದ್ದಾಗಿತ್ತು. | "ಸಾರ್ವಜನಿಕ ಉದ್ದೇಶಕ್ಕೆ" ಎಂಬುದನ್ನು ಯಾವ–ಯಾವ ಬಗೆಯ ಯೋಜನೆಗಳು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. |
| ಬಲವಂತವಾಗಿ ಜಮೀನನ್ನು ವಶಪಡಿಸಿಕೊಳ್ಳಬಹುದಾಗಿತ್ತು. | • ಖಾಸಗಿ ಯೋಜನೆಗಳಿಗೆ 80% ಕುಟುಂಬಗಳ ಒಪ್ಪಿಗೆ ಬೇಕು<br>• ಸಾರ್ವಜನಿಕ–ಖಾಸಗಿ ಪಾಲುದಾರಿಕೆಯ ಯೋಜನೆಗಳಿಗೆ 70% ಕುಟುಂಬಗಳ ಒಪ್ಪಿಗೆ ಬೇಕು |
| ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಭೂ ಕಳೆದುಕೊಳ್ಳುವವರನ್ನು ಭಾಗಿಗಳನ್ನಾಗಿಸುತ್ತಿರಲಿಲ್ಲ ಹಾಗೂ ಪ್ರಕ್ರಿಯೆಯಲ್ಲಿ ಯಾವುದೇ ಪಾರದರ್ಶಕತೆ ಇರಲಿಲ್ಲ. | 'ಪೂರ್ವ–ಪರಿಶೀಲನೆ' (SIA- Social Impact Assessment) ಮಾಡುವಾಗ ಯೋಜನೆಯಿಂದ ಯಾರ ಜೀವನಾಧಾರಕ್ಕೆ ತೊಂದರೆ ಉಂಟಾಗುತ್ತದೆಯೋ ಅಂತಹ ಕುಶಲಕರ್ಮಿಗಳು, ಕಾರ್ಮಿಕರು, ಗುತ್ತಿಗೆ ಬೇಸಾಯಗಾರರು, ಮೀನುಗಾರರು, ಸಣ್ಣ ವ್ಯಾಪಾರಿಗಳು ಇತ್ಯಾದಿ ಹೀಗೆ ಎಲ್ಲರ ಒಪ್ಪಿಗೆ ಪಡೆಯುವುದು ಅನಿವಾರ್ಯ. |
| ಹಳೆಯದಾದ ಹಾಗೂ ನೈಜಮಾರುಕಟ್ಟೆ ಮೌಲ್ಯಕ್ಕಿಂತ ಬಹಳ ಕಡಿಮೆ ಇದ್ದ ಬೆಲೆಯನ್ನು ನಿಗದಿಪಡಿಸಿ ಪರಿಹಾರದ ರೂಪದಲ್ಲಿನೀಡಲಾಗುತ್ತಿತ್ತು. | ನಿಗದಿಪಡಿಸುವ ಪರಿಹಾರ ಧನ ಮಾರುಕಟ್ಟೆ ಬೆಲೆಗೆ ನೇರ ಸಂಬಂಧ ಹೊಂದಿರುತ್ತದೆ:<br>• ಗ್ರಾಮೀಣ ಪ್ರದೇಶಗಳಲ್ಲಿ ಮಾರುಕಟ್ಟೆ ಬೆಲೆಗಿಂತ 4 ಪಟ್ಟು<br>• ನಗರಗಳಲ್ಲಿ ಮಾರುಕಟ್ಟೆ ಬೆಲೆಗಿಂತ 2 ಪಟ್ಟು<br>• ಕುಶಲಕರ್ಮಿಗಳು, ಕಾರ್ಮಿಕರು, ಗುತ್ತಿಗೆ ಬೇಸಾಯಗಾರರು, ಮೀನುಗಾರರು, ಸಣ್ಣ ವ್ಯಾಪಾರಿಗಳು ಮುಂತಾದವರಿಗೆ ಅವರು ಯಾವುದೇ ಭೂಮಿ ಹೊಂದಿಲ್ಲದಿದ್ದರೂ ಪರಿಹಾರ ನೀಡಲಾಗುತ್ತದೆ. |
| ಯೋಜನೆ ಪ್ರಾರಂಭಗೊಳ್ಳದ ಸನ್ನಿವೇಶದಲ್ಲಿ ಕೆಲ ದಿನಗಳ ನಂತರ ಭೂಮಿಯನ್ನು ಯಾರ ಅನುಮತಿಯೂ ಇಲ್ಲದೆ ಖಾಸಗಿಯವರಿಗೆ ಮಾರಾಟ ಅಥವಾ ಗುತ್ತಿಗೆ ನೀಡಬಹುದು. | ಯೋಜನೆ 5 ವರ್ಷದೊಳಗಾಗಿ ಪ್ರಾರಂಭಗೊಳ್ಳದಿದ್ದರೆ ಭೂಮಿಯನ್ನು ಮೂಲ ಮಾಲಿಕರಿಗೆ ಮರಳಿಸಲಾಗುತ್ತದೆ. |

**2013ರ LARR ACT ಗೂ ಹಾಗೂ 2014 ರ ತಿದ್ದುಪಡಿಯ ಕಾಯ್ದೆಗೂ ಇರುವ ಪ್ರಮುಖ ವ್ಯತ್ಯಾಸಗಳು**

| 2013ರ LARR ACT | 2014 ರ ಲ್ಯಾಂಡ್ ಆರ್ಡಿನೆನ್ಸ್ |
|---|---|
| • ಖಾಸಗಿ ಯೋಜನೆಗಳಿಗೆ 80% ಕುಟುಂಬಗಳ ಒಪ್ಪಿಗೆ ಕಡ್ಡಾಯ<br>• ಸಾರ್ವಜನಿಕ–ಖಾಸಗಿ ಪಾಲುದಾರಿಕೆಯ ಯೋಜನೆಗಳಿಗೆ 70% ಕುಟುಂಬಗಳ ಒಪ್ಪಿಗೆ ಕಡ್ಡಾಯ | "ಕಡ್ಡಾಯ" ವಾಗಿರುವ ವಿಧಿಗಳು ಈ ಕೆಳಗಿನ 5 ರೀತಿಯ ಯೋಜನೆಗಳಿಗೆ ಅನ್ವಯಿಸುವುದಿಲ್ಲ,<br>• ರಾಷ್ಟ್ರೀಯ ಭದ್ರತೆ ಮತ್ತು ರಕ್ಷಣಾ ಉತ್ಪಾದನೆ<br>• ಗ್ರಾಮೀಣ ಮೂಲಸೌಕರ್ಯ, ಗ್ರಾಮೀಣ ವಿದ್ಯುದೀಕರಣ<br>• ಸಾಮಾಜಿಕ ಮೂಲಸೌಕರ್ಯ<br>• ಕೈಗಾರಿಕಾ ವಲಯ<br>• ಕೈಗೆಟಕುವ ದರದಲ್ಲಿ ವಸತಿ ಹಾಗೂ ಬಡವರಿಗಾಗಿ ವಸತಿ |
| ಎಲ್ಲಾ ರೀತಿಯ ಯೋಜನೆಗಳಿಗೂ ಪೂರ್ವ ಪರಿಶೀಲನೆ (SIA- Social Impact Assessment) ಅಗತ್ಯ. | ಮೇಲೆ ಪಟ್ಟಿ ಮಾಡಿರುವ 5 ರೀತಿಯ ಯೋಜನೆಗಳಿಗೆ ಹಾಗೂ ಸಾರ್ವಜನಿಕ–ಖಾಸಗಿ ಪಾಲುದಾರಿಕೆಯ ಯೋಜನೆಗಳಲ್ಲಿ ಸರ್ಕಾರವೇ ಭೂಮಿ ಹೊಂದಿದ್ದರೆ ಪೂರ್ವ ಪರಿಶೀಲನೆ (SIA- Social Impact Assessment) ಅಗತ್ಯವಿಲ್ಲ. |
| ಸ್ವಾಧೀನದ ವೇಳೆ ಸರ್ಕಾರದಿಂದಾಗುವ ಯಾವುದೇ ತೊಂದರೆಗೆ ಆ ವಿಭಾಗದ ಮುಖ್ಯಸ್ಥ ಜವಾಬ್ದಾರನಾಗಿರುತ್ತಾನೆ. | • ವಿಭಾಗದ ಮುಖ್ಯಸ್ಥನ ವಿರುದ್ಧ ಸರಕಾರದ ಒಪ್ಪಿಗೆಯಿಲ್ಲದೆ ಯಾವುದೇ ಕಾನೂನು ಕ್ರಮ ಜರುಗಿಸುವಂತಿಲ್ಲ.<br>• ಅಧಿಕಾರಿಗಳು, ಮಾಧ್ಯಮ ಹಾಗೂ ನ್ಯಾಯಾಂಗದ ಭಯದಿಂದಾಗಿ ತಮ್ಮ ನಿರ್ಧಾರಗಳನ್ನು ನಿಧಾನಿಸದಂತೆ ನೋಡಿಕೊಳ್ಳಲು ಈ 'ವಿನಾಯಿತಿ' ನೀಡಲಾಗಿದೆ. |
| ಯೋಜನೆ 5 ವರ್ಷದೊಳಗಾಗಿ ಪ್ರಾರಂಭಗೊಳ್ಳದಿದ್ದರೆ ಭೂಮಿಯನ್ನು ಮೂಲ ಮಾಲಿಕರಿಗೆ ಮರಳಿಸಲಾಗುತ್ತದೆ. | ನಿಗದಿತ ಸಮಯದಲ್ಲಿ (5ವರ್ಷ ಅಥವಾ ಅಧಿಕ) ಅವಧಿಯಲ್ಲಿ ಯೋಜನೆ ಪ್ರಾರಂಭಗೊಳ್ಳದಿದ್ದರೆ ಭೂಮಿಯನ್ನು ಮೂಲ ಮಾಲಿಕರಿಗೆ ಮರಳಿಸಲಾಗುತ್ತದೆ. |

### ಎನ್.ಡಿ.ಎ. ಸರ್ಕಾರ ಈ 2013ರ ಕಾಯ್ದೆಯ ಕೆಲವು ನಿಬಂಧನೆಗಳಿಗೆ ತಿದ್ದುಪಡಿ ತರಲು ಸುಗ್ರೀವಾಜ್ಞೆ ಹೊರಡಿಸಲು ನೀಡಿದ ಕಾರಣಗಳೇನು?

1894 ರ ಭೂ ಸ್ವಾಧೀನ ಕಾಯ್ದೆ ಅತ್ಯಂತ ಹಳೆಯದಾದ, ವಸಾಹತುಶಾಯಿ ಹಾಗೂ ಭೂ ಮಾಲಿಕರನ್ನು ಶೋಷಿಸುವಂತದ್ದಾಗಿತ್ತು. ಸಾಮಾಜಿಕ ಪರಿಣಾಮಗಳನ್ನು ನಿರ್ಧರಿಸುವ ಅವಕಾಶ, ನ್ಯಾಯಯುತ ಪರಿಹಾರ, ವಿವಾದಗಳ ಇತ್ಯರ್ಥಗಳಂತಹ ವಿಷಯಗಳನ್ನು ಗಮನದಲ್ಲಿರಿಸಿಕೊಂಡು LARR ACT *(3ನೇ ಪುಟಕ್ಕೆ)*

# ಭಾರತೀಯ ಸಾಮಾಜಿಕ ಕ್ರಾಂತಿಯ ಪಿತಾಮಹ – ಜ್ಯೋತಿಬಾ ಫುಲೆ

ಈ ನಾಡಿನಲ್ಲಿ ಒಂದು ಕಾಲವಿತ್ತು. ಅದು ಹೇಗಿತ್ತು ಅಂದರೆ ಈ ನಾಡಿನ ಜನರು ಪರಕೀಯರ ಚಾಕರಿ ಮಾಡಲು ಸಿದ್ದರಿದ್ದರು, ಆದರೆ ಪಕ್ಕದ ಮನೆಯವರನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಸಮುದ್ರ ದಾಟಿಬಂದ ಬಿಳಿಯರಿಗೆ ಸಲಾಂ ಹೊಡೆಯುತ್ತಿದ್ದ, ಆದರೆ ಎದುರು ಮನೆಯವನು ಕುಡಿಯಲು ಒಂದು ಹನಿನೀರಿಲ್ಲದೇ ಸಾಯುತ್ತಿದ್ದರೂ ನೀರುಕೊಟ್ಟರೇ ಎಲ್ಲಿ ಮೈಲಿಗೆ ಆಗಿ ಬಿಡ್ತೀನೋ ಎಂದು ಭಾವಿಸುತ್ತಿದ್ದರು. ವಿದೇಶಗಳಿಂದ ಬಂದವರಿಂದ ಆಳಿಸಿಕೊಳ್ಳಲು ಸಿದ್ದರಿದ್ದರು, ಆದರೆ ತನ್ನದೇ ವಯಸ್ಸಿನ, ತನ್ನೂರಿನಲ್ಲೇ ಆದರೆ ಬೇರೆ ಜಾತಿಯಲ್ಲಿ ಹುಟ್ಟಿದವನನ್ನು ಮುಟ್ಟಿದರೆ ಮಡಿ ಹಾಳಾಗುತ್ತದೆ ಎಂದುಕೊಳ್ಳುವ ಪರಿಸ್ಥಿತಿಗಳಿಂದಾಗಿ ಸಾವಿರ–ಸಾವಿರ ವರ್ಷಗಳ ಇತಿಹಾಸದ ಭಾರತವನ್ನು ವಿನಾಶದ ಅಂಚಿಗೆ ಬಂದು ನಿಲ್ಲಿಸಿತ್ತು.

ಆದರೆ ಇವುಗಳನ್ನು ನೋಡಿ, ಸಹಿಸಲಾಗದೇ ಬದಲಾವಣೆಗೆ, ಪರಿವರ್ತನೆಗೆ ಹಲವರು ಪ್ರಯತ್ನ ಮಾಡಿದರು. ಅಂತಹವರಿಗೆ ಅಗ್ರಪಂಕ್ತಿಯನ್ನು ಹಾಕಿಕೊಟ್ಟು, ಮುನ್ನುಡಿ ಬರೆದ ವ್ಯಕ್ತಿ ಎಂದರೆ ಜ್ಯೋತಿರಾವ್ ಗೋವಿಂದ ಫುಲೆ..

ಇಡೀ ಸಮಾಜ ಮುಸಲ್ಮಾನ್ ರಾಜರಿಂದ, ಯೂರೋಪಿನ ಆಡಳಿತಗಾರರಿಂದ, ನಮ್ಮದೇ ನೆಲದ ಜಾತಿ ವ್ಯವಸ್ಥೆಯ ಕಚ್ಚಾಟದಿಂದ ದೂರವಾಗಿದ್ದ ಜನರನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದರು. ಮಹಾರಾಷ್ಟ್ರದಲ್ಲಿ ಮೊಟ್ಟಮೊದಲ ಬಾರಿಗೆ ಹರಿಜನರಿಗೆಂದೇ ಶಾಲೆ ಪ್ರಾರಂಭಿಸಿದರು. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಿದರು. ಮೂಢನಂಬಿಕೆ ಕಂದಾಚಾರಗಳ ವಿರುದ್ಧ ತೊಡೆ ತಟ್ಟಿದರು. ಅಷ್ಟೇ ಅಲ್ಲಾ, ಕೃಷಿಕರ–ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಹೋರಾಟ ಸಂಘಟಿಸಿದರು. ವಿಧವಾ ವಿವಾಹಕ್ಕೆ ನಾಯಕರಾದರು. ಅನಾಥರಿಗಾಗಿ ಆಶ್ರಮವನ್ನೂ ತೆರೆದರು.. ಹೀಗೆ ಸಮಾಜದ ಶ್ರೇಯೋಭಿವೃದ್ಧಿಗಾಗಿ, ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಕ್ರಾಂತಿಕಾರಕ ರೀತಿಯಲ್ಲಿ ಬಹುದೊಡ್ಡ ಹೋರಾಟಕ್ಕೆ ನಾಂದಿ ಹಾಡಿದರು.

ಇಷ್ಟೆಲ್ಲಾ ಮಾಡಿದ ಈ ಫುಲೆ ಹುಟ್ಟಿದ್ದೇನು ಶ್ರೀಮಂತ ಕುಟುಂಬದಲ್ಲೋ ಅಥವಾ ಉನ್ನತ ಜಾತಿಯಲ್ಲೋ ಅಲ್ಲ. ಮಹಾರಾಷ್ಟ್ರದ ಕೆಳ ಜಾತಿಯೊಂದರಲ್ಲಿ, ಬಡ ಕುಟುಂಬದಲ್ಲಿ ಜನಿಸಿದ ಫುಲೆ ಕೂಡಾ ಆ ದಿನಗಳಲ್ಲಿ ಸಾಮಾಜಿಕ ಅಸಮತೋಲನಗಳನ್ನು, ಜಾತಿಯ ವಿಷಬೀಜಗಳ ಸಮಸ್ಯೆಯನ್ನು ಎದುರಿಸಿಯೇ ಬೆಳೆದವರು. ಆದರೆ ಜ್ಯೋತಿರಾವ್ ಫುಲೆ, ಇದಕ್ಕೆಲ್ಲ ಪರಿಹಾರವನ್ನು, ಸಮಾಜದಲ್ಲಿ ಬದಲಾವಣೆಗಳನ್ನು ತರಬೇಕು ಎಂದು ಧೃಡ ನಿಶ್ಚಯ ಮಾಡಿದರು. ಇದಕ್ಕೆ ಅವರಿಗೆ ಪ್ರೇರಣೆ ನೀಡಿದ್ದು ಶಿವಾಜಿ ಮಹಾರಾಜ, ಅಮೆರಿಕದ ವಾಷಿಂಗ್ಟನ್, ಮಾರ್ಟಿನ್ ಲೂಥರ್ ಹಾಗೂ ಕಾರ್ಲ್‌ಮಾರ್ಕ್ಸ್. *(3ನೇ ಪುಟಕ್ಕೆ)*



# ಸಮರ್ಥ ಭಾರತ

## ಒಂದು ಗುರಿ - ಹಲವು ದಾರಿ

ಶಾಶ್ವತ ಜ್ಞಾನನಿಧಿಯ ತವರುಭೂಮಿಯಾಗಿ ಐಹಿಕ ಮತ್ತು ಪಾರಮಾರ್ಥಿಕ ಲೋಕದ ರಹಸ್ಯಗಳನ್ನು ಮಥಿಸಿ ಹೊರಹೊಮ್ಮಿಸಿದ ಭಾರತ–ಇಂದಿನ ಕಾಲಘಟ್ಟದ ಜಗತ್ತಿನಲ್ಲಿ ಒಂದು ಪ್ರಮುಖ ಪಾತ್ರ ವಹಿಸುತ್ತಿದೆ. ಸದಾ ಸ್ಪರ್ಧೆಯಲ್ಲಿ ತೊಳಲಾಡುತ್ತಿರುವ ಐಹಿಕ ಸಾಧನೆಗಳ ಜಗತ್ತು ಇಂದು ವೇದ ಉಪನಿಷತ್ತುಗಳ ಕಡೆ ಪರಿಹಾರಕ್ಕೆ ನೋಡುತ್ತಿದೆ.

ಆದರೆ ಶತಮಾನಗಳ ದಾಸ್ಯದಿಂದ ಭಾರತೀಯರ ವೈಜ್ಞಾನಿಕ ದೃಷ್ಟಿಕೋನ ಮತ್ತು ಸಾಧನೆಗಳ ಮರೆವಿನಿಂದಾಗಿ ಎಲ್ಲಾ ಮಹತ್ತರವಾದ ಸಂಶೋಧನೆ ತಂತ್ರಜ್ಞಾನದ ಅಭಿವೃದ್ಧಿ ಪಶ್ಚಿಮದ ದೇಶಗಳಲ್ಲಿ ಮಾತ್ರ ಸಾಧ್ಯ ಎನ್ನುವ ಮನೋಭಾವ ಬೆಳೆದುಬಿಟ್ಟಿದೆ. ವರಹಾಮಿಹಿರ, ಆರ್ಯಭಟ, ಚರಕ, ಸುಶ್ರುತ ಮತ್ತು ಭಾಸ್ಕರರಂತಹ ಸಹಸ್ರ ವಿಜ್ಞಾನ ಋಷಿಗಳಿಗೆ ಜನ್ಮ ನೀಡಿದ ಗರ್ಭಕ್ಕಿಂದು ಬಂಜೆತನ ಕಾಡುತ್ತಿದೆ. ಇಂದಿನ ಯುವಜನಾಂಗ ಮೂಲವಿಜ್ಞಾನಗಳ ವಿಷಯಗಳ ಗಂಭೀರ ಅಧ್ಯಯನದಿಂದ ದೂರಸರಿದು ಬೇಗನೆ ಹೆಚ್ಚು ಸಂಬಳ ಗಳಿಸಬಲ್ಲ ಉದ್ಯೋಗಗಳನ್ನು ದೊರಕಿಸಬಲ್ಲ ಡಿಗ್ರಿಗಳನ್ನೇ ಹೆಚ್ಚು ಹೆಚ್ಚು ಆಯ್ಕೆ ಮಾಡಿಕೊಳ್ಳುತ್ತಿದೆ.

ಇಂದು ನಾವು ವೈಜ್ಞಾನಿಕ ಪ್ರತಿಭೆಗಳ ದಿವಾಳಿತನವನ್ನು ನೋಡುತ್ತಿದ್ದೇವೆ. ನಾವಿಂದು ಒಂದುಕಡೆಯಿಂದ ನಮ್ಮ ಪ್ರಾಚೀನ ಪರಂಪರೆಯ ಸಿರಿತನವನ್ನೂ ಗುರುತಿಸುತ್ತಿಲ್ಲ , ಮತ್ತೊಂದೆಡೆ ಆಧುನಿಕ ವಿಜ್ಞಾನ–ತಂತ್ರಜ್ಞಾನಳ ಮೂಲಕ ಗಟ್ಟಿ ತತ್ವಗಳ ಮೇಲೆ ನಿಂತಿರುವ ಹೊಸಹೊಸ ಸಂಶೋಧನೆಗಳನ್ನೂ ಮಾಡುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಭಾರತೀಯ ವೈಜ್ಞಾನಿಕ ಇತಿಹಾಸದ ಬಗ್ಗೆ ಜಾಗೃತಿ ಮೂಡಿಸಿ ಜನರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಿ ತಂತ್ರಜ್ಞಾನ ಕೌಶಲ್ಯದ ಅಭಿವೃದ್ಧಿಗೆ ಅನಿವಾರ್ಯವಾದ ಮೂಲವಿಜ್ಞಾನದ ಅಧ್ಯಯನಕ್ಕೆ ಒತ್ತುಕೊಡುವುದು ಇಂದು ಅತ್ಯಗತ್ಯವಾಗಿದೆ.

# ವೈಜ್ಞಾನಿಕ ಜಾಗೃತಿ – ವಿಜ್ಞಾನ ಭಾರತಿ

### ಚಟುವಟಿಕೆಯ ಬಗ್ಗೆ

ಸಹಸ್ರಾರು ವರ್ಷಗಳಿಂದ ನಿರಂತರವಾಗಿ ನಡೆದುಬಂದಿರುವ ಭಾರತೀಯ ಜೀವನ ಪದ್ಧತಿಯಲ್ಲಿ ಹಾಸುಹೊಕ್ಕಾಗಿರುವ ವೈಜ್ಞಾನಿಕತೆಯನ್ನು ಪುನರುಜ್ಜೀವನಗೊಳಿಸುವ ಕಾರ್ಯದಲ್ಲಿ ವಿಜ್ಞಾನ ಭಾರತಿ ತೊಡಗಿಕೊಂಡಿದೆ.

ವಿಜ್ಞಾನ ಭಾರತಿ – ಸ್ವದೇಶಿ ಸೈನ್ಸ್ ಮೂವ್‌ಮೆಂಟ್ ಎಂದೇ ಪರಿಚಿತ. ಸ್ವದೇಶಿ ಎಂದರೆ – ಪ್ರಕೃತಿ, ಸಮಾಜ ಮತ್ತು ಆಧ್ಯಾತ್ಮಿಕ ಜ್ಞಾನಗಳನ್ನು ಒಂದಾಗಿ ನೋಡುವ, ವೇದಕಾಲದಿಂದಲೂ ಸಮಗ್ರವಾಗಿ, ಏಕಾತ್ಮವಾಗಿ, ಸರ್ವಸಮಾವೇಶಕವಾಗಿ ವಿಕಾಸ ಆಗಿರುವ ಭಾರತೀಯ ಜೀವನ ದೃಷ್ಟಿಯೇ ಆಗಿದೆ.

### ವಿಜ್ಞಾನ ಭಾರತಿಯ ಕಾರ್ಯಗಳು

- ಸ್ವದೇಶಿ ವಿಜ್ಞಾನದ ಪ್ರಖರ ಚಳುವಳಿ
- ಜ್ಞಾನ–ವಿಜ್ಞಾನ (ಆಧುನಿಕ – ಸಾಂಪ್ರದಾಯಿಕ ವಿಜ್ಞಾನಗಳನ್ನು ಮತ್ತು ಪ್ರಾಕೃತಿಕ– ಅಧ್ಯಾತ್ಮಿಕ ವಿಜ್ಞಾನಗಳನ್ನು) ಒಗ್ಗೂಡಿಸುವ ಚಳುವಳಿ
- ಆಧುನಿಕ ವಿಜ್ಞಾನವನ್ನು ರಾಷ್ಟ್ರೀಯ ಅಗತ್ಯಗಳಿಗೆ ಜೋಡಿಸುವ ಪ್ರಯತ್ನ
- ಪ್ರಾಚೀನ ಭಾರತದ ಸಾಧನೆಗಳು ಹೇಗೆ ಆಧುನಿಕ ವಿಜ್ಞಾನದ ಪ್ರಗತಿಗೆ ಕಾರಣವಾಗಿದೆ ಎಂಬುದರ ಜಾಗೃತಿ
- ಯುವ ವಿಜ್ಞಾನಿ–ವಿದ್ಯಾರ್ಥಿಗಳ ನಡುವೆ ಸೃಷ್ಟಿಶೀಲತೆ ಮೂಡಿಸುವ ಪ್ರಯತ್ನ
- ಭಾರತೀಯ ಯುವ ವೃಂದದಲ್ಲಿ ವೈಜ್ಞಾನಿಕ ದೃಷ್ಟಿಕೋನ, ಜ್ಞಾನದ ಹಸಿವು ಮತ್ತು ಸಂಶೋಧನೆಯ ತುಡಿತದಂತಹ ಗುಣಗಳನ್ನು ಬೆಳೆಸುವ ಪ್ರಯತ್ನ

### ನಾವೇನು ಮಾಡಬಹುದು?

- ಶಾಲೆಗಳಲ್ಲಿ ಭಾರತದ ವೈಜ್ಞಾನಿಕ ಇತಿಹಾಸ ಮತ್ತು ಕೊಡುಗೆಗಳ ಬಗ್ಗೆ ಜಾಗೃತಿ ಮೂಡಿಸುವುದು.
- ವಿದ್ಯಾರ್ಥಿಗಳಿಗೆ ಸರಳ ಪ್ರಯೋಗಗಳ ಮೂಲಕ ವೈಜ್ಞಾನಿಕ ವಿಷಯಗಳನ್ನು ವಿವರಿಸುವುದು.
- ಸರಳವಾದ ವಸ್ತುಗಳನ್ನು ಬಳಸಿ ಮಾಡಬಲ್ಲ ವಿಜ್ಞಾನ ಪ್ರಯೋಗಗಳ ಮಾದರಿಗಳನ್ನು ನಿರ್ಮಿಸುವುದು.
- ನಮ್ಮ ಆಚರಣೆಗಳ ಹಿಂದಿನ ವೈಜ್ಞಾನಿಕ ಹಿನ್ನೆಲೆಯನ್ನು ವಿಶ್ಲೇಷಿಸಿ ವಿವರಿಸುವುದು.
- ವಿಜ್ಞಾನ ಭಾರತಿಯ ಕಾರ್ಯಕರ್ತರಾಗಿ ಕೆಲಸ ಮಾಡುವುದು
- ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಿಜ್ಞಾನ ಶಿಕ್ಷಕರ ತರಬೇತಿಗಳ ಆಯೋಜನೆ
- ವಿಜ್ಞಾನ ಮೇಳಗಳು ಮತ್ತು ಪ್ರದರ್ಶನಗಳ ಆಯೋಜನೆ
- ಬ್ಲಾಗ್ ಬರವಣಿಗೆ, ನಿಯತಕಾಲಿಕೆಗಳಿಗೆ ಲೇಖನ ಬರೆಯುವುದು.
- ವಿಜ್ಞಾನ ವಿಷಯಗಳ ವೆಬ್‌ಸೈಟ್ ನಿರ್ವಹಿಸುವುದು.
- ವೈಜ್ಞಾನಿಕ ವಿಷಯಗಳನ್ನು ಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಬರೆಯಬಲ್ಲ ಲೇಖಕರಿಗೆ ಪ್ರೋತ್ಸಾಹ.
- ವೀಡಿಯೋ, ಆ್ಯನಿಮೇಶನ್‌ಗಳ ಮೂಲಕ ಸರಳವಾದ ಭಾಷೆಯಲ್ಲಿ ವೈಜ್ಞಾನಿಕ ವಿಷಯಗಳನ್ನು ಪ್ರಸಾರ ಮಾಡುವುದು.
- ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ವಿಜ್ಞಾನಿಗಳು ಹಾಗೂ ಪ್ರಾಧ್ಯಾಪಕರುಗಳನ್ನು ಈ ಕಾರ್ಯದಲ್ಲಿ ಜೋಡಿಸುವುದು

**ಸಂಪರ್ಕ:** **ಚಂದ್ರಶೇಖರ್,** 107/1, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ – 560 003. ಇ–ಮೇಲ್: chandra.wac@gmail.com
**ಅಜಿತ್ ನಾಯರ್,** 3ನೇ ಮಹಡಿ, ವಿಎನ್‌ಎಸ್ ಕಟ್ಟಡ, ಅರೆಕೆರೆ ಮುಖ್ಯರಸ್ತೆ, ಬೆಂಗಳೂರು – 560 076
ಇ–ಮೇಲ್ : nair.ajit1@gmail.com

ನೆಲದ ಮಾತು

# ಬಹು ಉಪಯೋಗಿ ನೆಕ್ಕರೆ

ಕಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಸಿಗುವ ನೆಕ್ಕರೆ ಗಿಡದ ಪರಿಚಯ ಹೆಚ್ಚಿನ ಜನರಿಗೆ ಇರಲಾರದು. ಕೆರೆ, ಬಾವಿ, ನದಿಗಳ ಬದಿಗಳಲ್ಲಿ ಬೆಳೆಯುವ ಗಿಡ ಅನೇಕ ರೆಂಬೆಗಳನ್ನು ಬಿಟ್ಟು ಹಿಂಡು ಹಿಂಡಾಗಿ ಬೆಳೆಯುತ್ತದೆ. ರೆಂಬೆಗಳು ಕೆಂಬಣ್ಣದಲ್ಲಿರುವುದು ಇದರ ವಿಶೇಷತೆ. ಮೂರರಿಂದ ನಾಲ್ಕು ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಗಿಡದ ಎಲೆಗಳು ದಪ್ಪಗಿದ್ದು, ಕೈಗೆ ತಾಕಿದರೆ ತುರಿಸಿದಂತೆ ಭಾಸವಾಗುತ್ತದೆ.

ಅತ್ಯಧಿಕ ಜೀವಸತ್ವವನ್ನು ಹೊಂದಿರುವ ಗಿಡ ಎಂಬ ಹೆಗ್ಗಳಿಕೆ ಕೂಡಾ ಇದರದ್ದು. ಚಿಗುರನ್ನು ಸಾಂಬಾರು, ಚಟ್ನಿಯಲ್ಲಿ ಉಪಯೋಗಿಸುತ್ತಾರೆ. ಕಾಯಿ ತಿನ್ನುವುದರಿಂದ ಬಾಯಿ ಉಣ್ಣಿನಂತಹ ಕಾಯಿಲೆಗಳು ತಕ್ಷಣ ವಾಸಿ ಯಾಗುತ್ತವೆಯಂತೆ. ಹೂ ನೇರಳೆ ಬಣ್ಣವನ್ನು ಹೊಂದಿದ್ದು ಕುಸುಮ ಹಳದಿ ಮತ್ತು ಕೆಂಪು ಬಣ್ಣದಿಂದ ನೋಡುಗರ ಗಮನ ಸೆಳೆಯುತ್ತದೆ. ಹೂವಿನಲ್ಲಿ ಐದು ಎಸಳುಗಳಿದ್ದು ಅಂಗೈಯಗಲದ ಗಾತ್ರದಲ್ಲಿರುತ್ತದೆ. ಹೂ ನಾಲ್ಕೈದು ದಿನಗಳವರೆಗೆ ಹಾಳಾಗುವುದಿಲ್ಲ. ಹೂ ಮುದುಡಿದ ನಂತರ ಕಾಯಿಯ ಬೆಳವಣಿಗೆ ಆರಂಭವಾಗುತ್ತದೆ. ಕಾಯಿ ಬೆಳೆದಾಗ ಕೆಂಬಣ್ಣಕ್ಕೆ ತಿರುಗುತ್ತದೆ. ಹಿಂದಿನ ಕಾಲದಲ್ಲಿ ಇದರ ಹಣ್ಣನ್ನು ಹಸಿವಿಗಾಗಿ ಹುಡುಕಿಕೊಂಡು ಹೋಗಿ ತಿನ್ನುತ್ತಿದ್ದರಂತೆ.




ಸಿಪ್ಪೆ ಕೆಂಬಣ್ಣ ಹೊಂದಿದ್ದು, ಹಣ್ಣಿನ ಒಳಭಾಗ ಕಡು ನೇರಳೆಯಾಗಿರುತ್ತದೆ. ಸಿಪ್ಪೆ ತೆಗೆದು ಸೇವಿಸಬಹುದು. ವರ್ಷದುದ್ದಕ್ಕೂ ಹೂಬಿಟ್ಟು ಕಾಯಿ ನೀಡುವ ನೆಕ್ಕರೆ ಹೂಗಳು ಫೆಬ್ರುವರಿ ಮಾಸದಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಹೂ ಹೆಚ್ಚು ಪರಿಮಳ ಹೊಂದಿಲ್ಲ. ದೇವರ ಮುಡಿಗೂ ನೆಕ್ಕರೆ ಹೂವನ್ನು ಕೆಲವು ಕಡೆಗಳಲ್ಲಿ ಬಳಸುತ್ತಾರೆ. ಉತ್ತರ ಕರ್ನಾಟಕದಲ್ಲಿ ನೆಕ್ಕರೆ ಗಿಡ ಕಾಣಸಿಗುವುದೇ ಅಪರೂಪ. ಈ ಗಿಡ ಹುಟ್ಟಿದ ಜಾಗದಲ್ಲಿ ನೀರು ಸಿಗುತ್ತದೆ. ಅಲ್ಲಿ ಬಾವಿ ತೋಡಬಹುದೆಂಬ ನಂಬಿಕೆ ಇಂದಿಗೂ ಹಳ್ಳಿಗಳಲ್ಲಿದೆ.

ನೀರಿನಾಂಶ ಇರುವೆಡೆಗಳಲ್ಲೇ ಹೆಚ್ಚಾಗಿ ಬೆಳೆಯುವ ಈ ಗಿಡದ ಬೇರನ್ನು ತೆಂಗಿನ ಎಣ್ಣೆಯಲ್ಲಿ ಕುದಿಸಿ ಕಲ್ಲು ತಾಗಿದ ಗಾಯಗಳಿಗೆ ಹಚ್ಚಿದರೆ ಗಾಯ ಬೇಗ ಗುಣಮುಖವಾಗುತ್ತದೆಯಂತೆ. ಗಿಡ ದನ, ಕರುಗಳಿಗೆ ನೆಚ್ಚಿನ ಆಹಾರ ಕೂಡ. ಎಲ್ಲಾ ಮರದ ಎಲೆಗಳು ಹಣ್ಣಾದಾಗ ಹಳದಿ ಬಣ್ಣಕ್ಕೆ ತಿರುಗಿದರೆ ಇದರ ಎಲೆ ಕೆಂಬಣ್ಣಕ್ಕೆ ತಿರುಗುತ್ತದೆ. ಮಣ್ಣಿನ ಸವಕಳಿಯನ್ನು ತಡೆಗಟ್ಟುವಲ್ಲಿ ಈ ಗಿಡದ ಪಾತ್ರ ಪ್ರಮುಖವಾದುದು. ಪ್ರಕೃತ್ತಿದತ್ತವಾದ ಈ ಕಾಡು ಹೂವನ್ನು ನೋಡುವುದೇ ಕಣ್ಣಿಗೆ ಹಬ್ಬ. ಅಳಿವಿನಂಚಿನಲ್ಲಿರುವ ಈ ಗಿಡವನ್ನು ಉಳಿಸುವತ್ತ ನಮ್ಮ ಪ್ರಯತ್ನ ಸಾಗಬೇಕಾಗಿದೆ.

**ಕೃಪೆ: ಪ್ರಜಾವಾಣಿ**



- **ಪ್ಲಾಸ್ಟಿಕ್ ರಾಷ್ಟ್ರಧ್ವಜಗಳ ಉತ್ಪಾದನೆ, ಮಾರಾಟ ಹಾಗೂ ಖರೀದಿಗಳನ್ನು ನಿಷೇಧಿಸುವ ಕುರಿತ ಸಮಗ್ರ ನೀತಿ ಜಾರಿಗೆ ತರುವಂತೆ ಮುಂಬೈ ಹೈಕೋರ್ಟ್ ಮಹಾರಾಷ್ಟ್ರ ಸರ್ಕಾರಕ್ಕೆ ಸೂಚನೆ ನೀಡಿದೆ. ಪ್ಲಾಸ್ಟಿಕ್‌ನಿಂದ ತಯಾರಿಸಿದ ರಾಷ್ಟ್ರಧ್ವಜಗಳ ಬಳಕೆ, ಮಾರಾಟ, ಖರೀದಿಗಳನ್ನು ನಿಷೇಧಿಸುವ ಆಗಸ್ಟ್ 2007ರ ಸುತ್ತೋಲೆ ಅನುಷ್ಠಾನ ಸಂಬಂಧ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ವಿಭಾಗೀಯ ಪೀಠ ಈ ಸೂಚನೆ ನೀಡಿದೆ. ಸ್ವಾತಂತ್ರ್ಯೋತ್ಸವ ಹಾಗೂ ಗಣರಾಜ್ಯೋತ್ಸವದ ಬಳಿಕ ಪ್ಲಾಸ್ಟಿಕ್ ರಾಷ್ಟ್ರಧ್ವಜಗಳು ಬೀದಿ–ಚರಂಡಿ ಹೀಗೆ ಎಲ್ಲೆಂದರಲ್ಲಿ ಬಿದ್ದಿರುತ್ತವೆ. ಇದು ಪರಿಸರಕ್ಕೆ ಹಾನಿಯಾಗುವುದು ಮಾತ್ರವಲ್ಲದೇ ರಾಷ್ಟ್ರಧ್ವಜಕ್ಕೆ ಸಲ್ಲಿಸುವ ಅವಮಾನವೂ ಆಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಸೂಚನೆ ನೀಡಿರುವ ಹೈಕೋರ್ಟ್, ಅಂಥ ಧ್ವಜಗಳನ್ನು ಖರೀದಿಸದಂತೆ ಸಾರ್ವಜನಿಕರಲ್ಲಿ ಸರ್ಕಾರ ಜಾಗೃತಿ ಮೂಡಿಸಬೇಕು. ಜತೆಗೆ ಅವುಗಳ ಉತ್ಪಾದನೆ, ಮಾರಾಟ ನಿಷೇಧದ ಬಗ್ಗೆ ಸಮಗ್ರ ನೀತಿ ಜಾರಿಗೆ ತರಬೇಕು ಎಂದು ಸೂಚಿಸಿದೆ.**



- 'ನಮ್ಮ ಬ್ಯಾಂಕ್‌ನಲ್ಲಿ ನೀವು ಠೇವಣಿ ಇರಿಸಿರುವ ಮೊತ್ತ ಭಾರತ ಸರ್ಕಾರಕ್ಕೆ ತೆರಿಗೆ ಪಾವತಿಸಿರುವುದೇ. ಈ ಬಗ್ಗೆ ನಮಗೆ ದಾಖಲೆ ನೀಡಿ' ಎಂದು ಸ್ವಿಜರ್ಲೆಂಡ್‌ನ ಬ್ಯಾಂಕ್‌ಗಳು ಭಾರತೀಯ ಖಾತೆದಾರರಿಗೆ ಕಟ್ಟುನಿಟ್ಟಿನ ಸೂಚನೆ ರವಾನೆ ಮಾಡಿವೆ. ಕೇಂದ್ರ ಸರ್ಕಾರ ಸ್ವಿಜರ್ಲೆಂಡ್ ಸೇರಿದಂತೆ ಇತರ ವಿದೇಶಿ ರಾಷ್ಟ್ರಗಳ ಬ್ಯಾಂಕ್‌ಗಳಲ್ಲಿರುವ ಕಪ್ಪು ಹಣವನ್ನು ಸ್ವದೇಶಕ್ಕೆ ತರುವ ನಿಟ್ಟಿನಲ್ಲಿ ಹಲವಾರು ಕಾನೂನು ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ ಈ ಬೆಳವಣಿಗೆ ನಡೆದಿದೆ. ಹೀಗಾಗಿ ಖಾತೆದಾರರು ತಮ್ಮ ಠೇವಣಿ ಬಗ್ಗೆ ಲೆಕ್ಕಪರಿಶೋಧಕರಿಂದ ಪ್ರಮಾಣ ಪತ್ರ ಪಡೆಯುವಂತೆ ಮಾಡಿದೆ.

- **ಮೂರು–ನಾಲ್ಕು ತಿಂಗಳುಗಳ ಅವಧಿಯಲ್ಲಿ ಪಕ್ಷದ ಸದಸ್ಯರ ಸಂಖ್ಯೆ 9 ಕೋಟಿಗೂ ಹೆಚ್ಚಿಸುವ ಮೂಲಕ ಭಾರತೀಯ ಜನತಾ ಪಾರ್ಟಿ ವಿಶ್ವದಲ್ಲೇ ಅತಿ ಹೆಚ್ಚು ಸದಸ್ಯರನ್ನು ಹೊಂದಿರುವ ಪಕ್ಷ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಕರ್ನಾಟಕದಲ್ಲಿ 65,31,595 ಮಂದಿ ಮಿಸ್‌ಕಾಲ್ ನೀಡುವ ಮೂಲಕ ಸದಸ್ಯರಾಗಿದ್ದಾರೆ ಎಂದು ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಸಿ.ಟಿ.ರವಿ ಹೇಳಿದ್ದಾರೆ. ಅಲ್ಲದೇ ದೇಶದಲ್ಲಿ 9.28 ಕೋಟಿ ಮಂದಿ ಈ ಮಾದರಿಯಲ್ಲಿ ಪಕ್ಷದ ನೂತನ ಸದಸ್ಯರಾಗಿ ನೇಮಕಗೊಂಡಿದ್ದಾರೆ.**

- ಪ್ರಧಾನಿ ನರೇಂದ್ರ ಮೋದಿ ಅವರ ಸ್ವಚ್ಛ ಭಾರತ ಅಭಿಯಾನ ಈಗ ಜಗತ್ತಿನ ಅತ್ಯಂತ ಎತ್ತರದ ಶಿಖರ ಮೌಂಟ್ ಎವರೆಸ್ಟ್ ಅನ್ನೂ ತಲುಪಿದೆ. 34 ಸದಸ್ಯರನ್ನು ಒಳಗೊಂಡ ಭಾರತೀಯ ಸೇನೆಯ ತಂಡವೊಂದು ಮೌಂಟ್ ಎವರೆಸ್ಟ್‌ನಲ್ಲಿ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲಿದ್ದು, 4,000 ಕೆ.ಜಿ ಕಸವನ್ನು ಕೆಳಕ್ಕೆ ತರಲಿದೆ.

**ಸಂಪಾದಕೀಯ ಸಹಕಾರ** ಶ್ರೀವತ್ಸ, ಸುಮಂತ್ ನೆಮ್ಮಾರ್, ಸತ್ಯನಾರಾಯಣ ಶಾನಭಾಗ್, ಪ್ರವೀಣ್ ಪಟವರ್ಧನ್, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

1ನೇ ಪುಟದಿಂದ

## ಭೂ ಸ್ವಾಧೀನ ಮಸೂದೆ: ಏನು-ಎತ್ತ?

2013ನ್ನು ಜಾರಿಗೆ ತರಲಾಯಿತು. ಆದರೆ ಈ ಕಾಯ್ದೆಯಿಂದಾಗಿ ಭೂಸ್ವಾಧೀನಗೊಳಿಸಿಕೊಳ್ಳುವ ಪ್ರಕ್ರಿಯೆ ಅತ್ಯಂತ ಸಂಕೀರ್ಣ, ಕಠಿಣ ಹಾಗೂ ಅಪ್ರಯೋಗಿಕವೆನಿಸತೊಡಗಿತು. ಇದಕ್ಕಿದ್ದ ಕೆಲವು ಕಾರಣಗಳು,

1. **ಸರ್ಕಾರೇತರ ಸಂಘಟನೆಗಳ ಪಾತ್ರ:** ನಿಗದಿತ ಜಾಗದ 20–25% ಭೂ ಮಾಲಿಕರಿಗೆ ಇನ್ನೂ ಹೆಚ್ಚಿನ ಬೆಲೆಕೊಡಿಸುವ ಭರವಸೆ ನೀಡಿ, ಧರಣಿ ನಡೆಸುವಂತೆ ಹಾಗೂ ಭೂಸ್ವಾಧೀನ ಪ್ರಕ್ರಿಯೆಯನ್ನು ವಿರೋಧಿಸುವಂತೆ ಪ್ರೇರೆಪಿಸುವುದು. ಈ ಮೂಲಕ 70–80% ಜನರ ಒಪ್ಪಿಗೆ ಅನಿವಾರ್ಯ ಎಂಬ ಕಾಯ್ದೆಯ ಅಂಶವನ್ನು ದುರ್ಬಳಕೆ ಮಾಡಿಕೊಂಡು ಉದ್ದೇಶಿಸಿದ್ದ ಯೋಜನೆಯನ್ನು ಆರಂಭಗೊಳ್ಳದಂತೆ ಮಾಡಬಹುದಾಗಿತ್ತು.
2. **ವ್ಯಾಜ್ಯ ಅಥವಾ ದಾವೆಗಳು:** ಹೆಚ್ಚಿನ ಭೂಮಾಲೀಕರು ಸರಿಯಾದ ಭೂ ದಾಖಲೆಗಳನ್ನು ಹೊಂದಿರದ ಕಾರಣದಿಂದಾಗಿ ಭೂಮಿಯ ಸರಿಯಾದ ಮೌಲ್ಯಮಾಪನ ಮತ್ತು ದಾವೆ/ವ್ಯಾಜದಂತಹ ಸಮಸ್ಯೆಗಳಾಗುತ್ತಿದ್ದವು ಮತ್ತು ಇದರ ಪರಿಣಾಮವಾಗಿ ಭೂಸ್ವಾಧೀನ ಹಾಗೂ ಯೋಜನೆಯ ವೆಚ್ಚ ಹೆಚ್ಚಾಗುವಂತಾಗುತ್ತಿತ್ತು. ಪರಿಸರವಾದಿಗಳು ಹಾಗೂ ಯು.ಪಿ.ಎ. ಸರ್ಕಾರದಿಂದ ನಿರ್ಮಿತವಾಗಿದ್ದ ಪ್ರತಿಕೂಲ ಪರಿಸ್ಥಿತಿಗಳಿಂದಾಗಿ ಉದ್ಯಮಿಗಳು ಯಾವ ಹೊಸ ಯೋಜನೆಯನ್ನೂ ಆರಂಭಿಸಲು ಸಾಧ್ಯವಿಲ್ಲದ ವಾತಾವರಣ ನಿರ್ಮಾಣವಾಗಿತ್ತು.

ಅಭಿವೃದ್ಧಿಯನ್ನು ಚುರುಕುಗೊಳಿಸುವ ಉದ್ದೇಶದಿಂದ 2014ರ ಲ್ಯಾಂಡ್ ಆರ್ಡಿನೆನ್ಸ್ ತಾಯಾರಿಸಿದ್ದ ಎನ್.ಡಿ.ಎ ಸರಕಾರ ಹಲವಾರು ವಿಮರ್ಶೆ ಮತ್ತು ಸಲಹೆಗಳನ್ನು ಆಲಿಸಿದ ಬಳಿಕ ಕಾಯ್ದೆಗೆ 9 ಪ್ರಮುಖ ತಿದ್ದುಪಡಿಗಳನ್ನು ಮಾಡಿದೆ.

- ರೈಲು ಮಾರ್ಗ ಹಾಗೂ ಹೆದ್ದಾರಿಗಳ ಎರಡೂ ಬದಿಯಲ್ಲಿನ ಗರಿಷ್ಠ 1 ಕಿ.ಮೀ.ವರೆಗಿನ ಭೂಮಿಯನ್ನು ಕೇಂದ್ರ/ರಾಜ್ಯ ಸರಕಾರ 'ಕೈಗಾರಿಕಾ ಕಾರಿಡಾರ್' ಎಂದು ಅಂಗೀಕರಿಸಿದ ನಂತರವೇ ಭೂ ಸ್ವಾಧೀನಗೊಳಿಸಿಕೊಳ್ಳಬಹುದಾಗಿದೆ.
- ಸ್ವಾಧೀನದ ಸೂಚನೆ ನೀಡುವ ಮೊದಲೇ, ಬೇಕಾಗುವ ಅತ್ಯಂತ ಕನಿಷ್ಠ ಭೂಮಿಯನ್ನಷ್ಟೆ ವಶಪಡಿಸಿಕೊಳ್ಳುವಂತೆ ಖಚಿತಪಡಿಸುವುದು ಸರ್ಕಾರದ ಕೆಲಸವಾಗಿದೆ.
- ಸರ್ಕಾರ ಶುಷ್ಕ ಸೇರಿದಂತೆ ಬರಡು ಭೂಮಿಯ ಸಮೀಕ್ಷೆ ನಡೆಸಿ ದಾಖಲೆ ನಿರ್ವಹಿಸಬೇಕು.
- ತೊಂದರೆಗೊಳಗಾದ 'ಕೃಷಿ ಕಾರ್ಮಿಕರ' ಕುಟುಂಬದ ಕನಿಷ್ಠ ಒಬ್ಬ ಸದಸ್ಯನಿಗೆ ಕಡ್ಡಾಯ ಉದ್ಯೋಗ ನೀಡಬೇಕು.
- ಭೂಸ್ವಾಧೀನ ನಡೆಯುವ ಜಿಲ್ಲೆಗಳಲ್ಲಿನ ಕುಂದುಕೊರತೆಗಳ ಪರಿಹಾರ
- ಸಾಮಾಜಿಕ ಮೂಲಸೌಕರ್ಯ ಯೋಜನೆಗಳನ್ನು 'ವಿನಾಯತಿ'ಯ ಪಟ್ಟಿಯಿಂದ ಕೈ ಬಿಡಲಾಗಿದೆ. "ಸಾರ್ವಜನಿಕ ಉದ್ದೇಶದ" ಯೋಜನೆಗಳು ಎಂಬ ವ್ಯಾಖ್ಯಾನದಿಂದ ಖಾಸಗಿ ಶಾಲೆಗಳು ಹಾಗೂ ಆಸ್ಪತ್ರೆಗಳನ್ನು ಕೈ ಬಿಡಲಾಗಿದೆ.
- ಅಪರಾಧ ಪ್ರಕಿಯಾ ಸಂಹಿತೆಯ ಸೆಕ್ಷನ್ 197ರ ಪ್ರಕಾರ ಈ ಕಾಯ್ದೆಯಡಿ ಸರ್ಕಾರಿ ಸೇವಕರು ಮಾಡುವ ಅಪರಾಧಗಳ ಕುರಿತು ಕೋರ್ಟ್ ನಿರ್ಧಾರಗಳನ್ನು ತೆಗೆದುಕೊಳ್ಳಬಹುದಾಗಿದೆ.

1ನೇ ಪುಟದಿಂದ

## ಭಾರತೀಯ ಸಾಮಾಜಿಕ ಕ್ರಾಂತಿಯ ಪಿತಾಮಹ – ಜ್ಯೋತಿಬಾ ಫುಲೆ

**ಬುದ್ಧ ಮತ್ತು ಕಬೀರರ ಸಾಲಿನಲ್ಲಿ ನಿಲ್ಲಬಹುದಾದ ಬಹುದೊಡ್ಡ ಸಾಮಾಜಿಕ ಸುಧಾರಕ ಜ್ಯೋತಿರಾವ್ ಫುಲೆ**

**– ಡಾ. ಬಿ.ಆರ್ ಅಂಬೇಡ್ಕರ್**

ಇವರುಗಳಿಂದ ಪ್ರೇರಣೆ ಪಡೆದ ಫುಲೆ ಹಿಂದೆ ತಿರುಗಿ ನೋಡಿದ್ದೇ ಇಲ್ಲ, ಜಲಪಾತಗಳಂತೆ ಧೀರನಾದವನು ತನ್ನ ಪಾತ್ರವನ್ನು ತಾನೇ ನಿರ್ವಹಿಸಿಕೊಳ್ಳುತ್ತಾನೆ ಎಂಬ ಮಾತಿದೆಯಲ್ಲ, ಹಾಗೆ ಸಾಮಾಜಿಕ ದೃಷ್ಟಿಯಿಂದ ಕೆಳಹಂತದಿಂದ ಬಂದಿದ್ದರೂ, ಮಹಾರಾಷ್ಟ್ರಕ್ಕೆ ಒಂದು ಹೊಸ ಬಗೆಯ ನಾಯಕತ್ವವನ್ನೇ ಒದಗಿಸಿಕೊಟ್ಟರು ಫುಲೆ.

ಈ ಕಾರ್ಯಕ್ಕೆ ಮುನ್ನುಡಿಯಿಟ್ಟ ಜ್ಯೋತಿರಾವ್ ಮೊದಲು ಹಿಂದೂ ಸಮಾಜದ ಮಹಿಳೆಯರನ್ನು ಮೇಲೆತ್ತುವ ತೀರ್ಮಾನ ಮಾಡಿದರು. ಅದಕ್ಕಾಗಿ ಪುಣೆಯಲ್ಲಿ ಮಹಿಳೆಯರು ಹಾಗೂ ಹಿಂದುಳಿದವರಿಗೆಂದೇ ಶಾಲೆಯನ್ನು ಆರಂಭಿಸಿದರು. ಆದರೆ ಇದರಿಂದ ಫುಲೆ ಅವರಿಗೆ ಬೆದರಿಕೆಗಳು ಬಂದವು. ತಂದೆ ಗೋವಿಂದರಾವ್ ಹಾಗೂ ಪತ್ನಿ ಸಾವಿತ್ರಿಬಾಯಿ ಅವರಿಗೆ ಕೊಡಬಾರದ ಕಷ್ಟ ನೀಡಿದರು. ಈ ಬೆಳವಣಿಗೆಗಳಿಂದ ಕೊನೆಗೊಂದು ದಿನ ಸ್ವತಃ ಫುಲೆ ಅವರ ತಂದೆಯೇ ದಂಪತಿಯನ್ನು ಮನೆಯಿಂದ ಹೊರಹಾಕಿದರು. ಇದರಿಂದ ಜ್ಯೋತಿರಾವ್ ಅವರಿಗಿದ್ದ ಛಲವೇನು ಕಡಿಮೆಯಾಗಲಿಲ್ಲ. ಆದರೆ ಬೇರೆ ಬೇರೆ ಕಾರಣಗಳಿಂದಾಗಿ 5–6 ತಿಂಗಳಲ್ಲೇ ಶಾಲೆಯನ್ನು ಮುಚ್ಚಬೇಕಾಯಿತು.

**ಜ್ಯೋತಿಬಾ ಎಂದೇ ಪರಿಚಿತರಾಗಿರುವ ಮಹಾತ್ಮ ಜ್ಯೋತಿರಾವ್ ಗೋವಿಂದರಾವ್ ಪುಲೆ ಮಹಾರಾಷ್ಟ್ರದ ಪುಣೆಯಲ್ಲಿ 1827ರಲ್ಲಿ (ಏಪ್ರಿಲ್ 11, 1827– ನವೆಂಬರ್ 28, 1890) ಜನಿಸಿದ ಅವರು ಹೂಗಾರ ಸಮಾಜಕ್ಕೆ ಸೇರಿದವರು. ಅವರು 1847ರಲ್ಲಿ ಸ್ಕಾಟಿನ್ ಮಿಶನ್ ಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ನಡೆಸಿ ಮುಂದೆ ಅಲ್ಲಿ ಅಧ್ಯಾಪಕರಾದರು. ಸತತ ಓದುವ ಹವ್ಯಾಸ ಉಳ್ಳ ಅವರು ಶಿವಾಜಿ ಮತ್ತು ಜಾರ್ಜ್ ವಾಶಿಂಗ್‌ಟನ್ ಜೀವನ ಚರಿತ್ರೆ ಓದಿ ಪ್ರಭಾವಿತರಾದವರು. ಶಿವಾಜಿ ಬಗ್ಗೆ ಪುಸ್ತಕ ಬರೆದರು. ಅಮೆರಿಕದ ಲೇಖಕ ಥಾಮಸ್ ಪೇನ್‌ನ 'ರೈಟ್ಸ್ ಆಫ್ ಮ್ಯಾನ್' ಓದಿ ಮಾನವನ ಹಕ್ಕು ಸ್ವಾತಂತ್ರ್ಯಗಳ ವಿಚಾರ ತಿಳಿದುಕೊಂಡಿದ್ದರು. ಆರಂಭದಲ್ಲಿ ಇಂಗ್ಲಿಷ್ ಭಾಷಾ ಶಿಕ್ಷಣ ಅವರನ್ನು ಬ್ರಿಟಿಷ್ ವಿರೋಧಿಯಾಗಿ ಮಾಡಿ, ತನ್ನ ಕೆಲ ಗೆಳೆಯರ ಜತೆ ಶಸ್ತ್ರಾಸ್ತ್ರಗಳ ಬಳಕೆಯ ಬಗ್ಗೆ ಚಿಂತಿಸುವಂತೆ ಮಾಡಿತ್ತು.**

ಶಾಲೆ ಮುಚ್ಚಿದರೂ ಫುಲೆಯೇನು ಸುಮ್ಮನೆ ಕೂರುವವರಾಗಿರಲಿಲ್ಲ. ತಮ್ಮ ಮಡದಿಗೇ ವಿದ್ಯಾಭ್ಯಾಸ ಕೊಡಿಸಿದರು. ಈಗ ಮತ್ತೆ ಶಾಲೆ ಆರಂಭಿಸಿ ತಮ್ಮ ಹೆಂಡತಿಯಿಂದಲೇ ಪಾಠ ಮಾಡಿಸಿದರು. ಫುಲೆಯವರು ಮಕ್ಕಳಿಗೆ ನೀಡಿದ ಸವಲತ್ತುಗಳಿಂದ ಮಕ್ಕಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಇದರಿಂದಾಗಿ ಮತ್ತೊಂದು ಕಡೆ ಶಾಲೆ ತೆರೆದರು. ಸಮಾಜದ ಕೆಳವರ್ಗದ ಮಕ್ಕಳಿಗೂ, ಹೆಣ್ಣು ಮಕ್ಕಳಿಗೂ ಉತ್ತಮ ರೀತಿಯ ಶಿಕ್ಷಣ ನೀಡುತ್ತ ಬಂದರು.

ಶಿಕ್ಷಣದಲ್ಲಿ ಬದಲಾವಣೆಗೆ ಭಾಷ್ಯ ಬರೆಯುತ್ತಿದ್ದಂತೆ ವಿವಿಧ ಆಯಾಮಗಳಲ್ಲಿ ಇವರ ಕಾರ್ಯ ಪ್ರಾರಂಭವಾಯಿತು. ಸಮಾಜ ಸುಧಾರಣೆಯ ಕಾರ್ಯ ನಿರಂತರವಾಗಿ ನಡೆಯುತ್ತಿತ್ತು. ಆದರೆ ಇವರ ವೈಯಕ್ತಿಕ ಜೀವನಕ್ಕೂ ಹಣಕಾಸಿನ ಆವಶ್ಯಕತೆ ಇದ್ದೇ ಇತ್ತು. ಅದಕ್ಕಾಗಿ ಸ್ಕಾಟಿಷ್ ಮಿಷನರಿಯಲ್ಲಿ ಕೆಲಸಕ್ಕೆ ಸೇರಿದರು, ಹೊಲಿಗೆ ಕೆಲಸವನ್ನೂ ಶುರು ಮಾಡಿದರು, ಅಷ್ಟೇ ಅಲ್ಲಾ, ವಯಸ್ಕರಿಗಾಗಿ ರಾತ್ರಿ ಶಾಲೆಯನ್ನೂ ನಡೆಸುತ್ತಿದ್ದರು. ಅವರ ಮೊದಲ ಪ್ರಯಾರಿಟಿ ಸಮಾಜಕ್ಕಾಗಿಯೇ. ಅದರಲ್ಲಿ ಎಂದೂ ರಾಜಿ ಮಾಡಿಕೊಳ್ಳಲೇ ಇಲ್ಲ..

ಹೀಗೆ, ಕ್ರಾಂತಿಕಾರಕ ಬದಲಾವಣೆಗಳಿಗೆ ಕಾರಣಕರ್ತರಾದ ಜ್ಯೋತಿರಾವ್ ಫುಲೆ ಅವರ ಮೇಲೆ ಸಮಾಜದ ಉನ್ನತ ವರ್ಗಗಳವರ ವಕ್ರದೃಷ್ಟಿಯೂ ಬಿತ್ತು. ಸ್ವತಃ ಫುಲೆಯವರ ಕೊಲೆ ಸಂಚು ಕೂಡಾ ನಡೆಯಿತು. ಆದರೆ ಕೊಲೆ ಮಾಡಲು ಬಂದಿದ್ದ ನಾಮದೇವ್ ಹಾಗೂ ರೋಡ್ ಎಂಬಿಬ್ಬರು ಪಾತಕಿಗಳು ಕೊನೆಗೆ ಇವರ ಶಿಷ್ಯರಾಗಿಬಿಟ್ಟರು. ನಾಮದೇವ್ ಪಂಡಿತನಾದ, ಮುಂದೆ ಇವನೇ ಸತ್ಯಶೋಧಕ ಸಮಾಜದ ಪ್ರಮುಖರಲ್ಲೊಬ್ಬನಾದ. ರೋಡ್ ಅವರ ಅಂಗರಕ್ಷಕನಾಗಿನಿಂತ.

ಮಹಿಳಾ ಸಬಲೀಕರಣಕ್ಕೆ ಮುಂದಾದ ಅವರು ಅಂದಿನ ದಿನಗಳಲ್ಲಿ ಇದ್ದ ಸತಿ ಪದ್ಧತಿಯನ್ನು ದೂರ ಮಾಡಲು ಪ್ರಯತ್ನ ನಡೆಸಿದರು. ಹಾಗೂ ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು. ವಿಧವೆಯರನ್ನು ಅಂದು ನಿಕೃಷ್ಟವಾಗಿ ಕಾಣಲಾಗುತ್ತಿತ್ತು. ಹಾಗಾಗಿ ಅವರಿಗಾಗಿಯೇ ಒಂದು ಅನಾಥಾಲಯವನ್ನು ಸ್ಥಾಪಿಸಿದರು. ಅದಕ್ಕಿಂತ ವಿಶೇಷ ಅಂದರೆ, ಸ್ವತಃ ಅವರ ತಂದೆಯವರು ಮೃತಪಟ್ಟಾಗ ಸಂಪ್ರದಾಯದಂತೆ ಅವರ ತಿಥಿಯನ್ನು ಮಾಡಲಿಲ್ಲ. ಬದಲಾಗಿ ಬಡವರಿಗೆ ಊಟ ಹಾಕಿದರು, ಮಕ್ಕಳಿಗೆ ಪುಸ್ತಕ ಹಂಚಿದರು. ಹೀಗೆ ಕಂದಾಚಾರ, ಮೂಢನಂಬಿಕೆಗಳ ವಿರುದ್ಧ ಸಮರ ಸಾರಿ ಸಮಾಜದ ಜಾಗೃತಿ ಮೂಡಿಸಿದರು. ಸಮಾಜದ ಸಾಮರಸ್ಯಕ್ಕಾಗಿ ಶ್ರಮಿಸಿದರು.

ಈ ನಡುವೆ ತಮ್ಮ ವಿಚಾರಗಳನ್ನು ಪ್ರಸ್ತುತಪಡಿಸಲೆಂದು, ಸತ್ಯ ಶೋಧನೆಗೆಂದು ಫುಲೆ ಒಂದು ಸಂಸ್ಥೆಯನ್ನು ಆರಂಭಿಸಿದರು. ಅದೇ 'ಸತ್ಯ ಶೋಧಕ ಸಮಾಜ'. ಅದರ ಮೂಲಕ ಎಲ್ಲ ವರ್ಗಗಳ ಶ್ರೇಯೋಭಿವೃದ್ಧಿಗೆ, ಸಮಾನ ಶಿಕ್ಷಣಕ್ಕೆ, ಅಸಮಾನತೆಯ ನಿವಾರಣೆಗೆ, ಕಂದಾಚಾರಗಳ ನಿರ್ಮೂಲನೆಗೆ, ಶೋಷಿತರ – ದೀನದಲಿತರ – ಕೂಲಿಕಾರ್ಮಿಕರ ಪರವಾದ ಹೋರಾಟಕ್ಕೆ, ಮಹಿಳಾ ಸಬಲೀಕರಣಕ್ಕೆ ಹೋರಾಡಿದರು.

ಹೀಗೆ ಜನರಿಗಾಗಿ ಹೋರಾಡಿದ ಇವರನ್ನು ಜನರು 'ಮಹಾತ್ಮ' ನನ್ನಾಗಿಸಿದರು. ಈ ದೇಶದ ಜನ ಜ್ಯೋತಿರಾವ್ ಫುಲೆ ಅವರನ್ನು 'ಭಾರತೀಯ ಸಾಮಾಜಿಕ ಕ್ರಾಂತಿಯ ಪಿತಾಮಹ' ಎಂದು ಗೌರವಿಸಿದರು.

ಇದೇ ಫುಲೆ ಮುಂದೆ ಅಂಬೇಡ್ಕರ್, ಮಹಾತ್ಮ ಗಾಂಧಿಜೀ, ವೀರ ಸಾವರ್ಕರ್ ಅವರಂತಹ ನೂರಾರು ಜನರಿಗೆ ಪ್ರೇರಣಾಶಕ್ತಿಯಾಗಿ ಹೊರಹೊಮ್ಮಿದರು. ಈ ಮಹಾತ್ಮ ಹುಟ್ಟಿದ ದಿನ ಏಪ್ರಿಲ್ ತಿಂಗಳ 11ರಂದು. ಸ್ವತಃ ಶಾಲೆ ಪ್ರಾರಂಭಿಸಿ, ತಾನು ಇಡೀ ಸಮಾಜಕ್ಕೆ ಶಿಕ್ಷಕರಾದ ಜ್ಯೋತಿರಾವ್ ಫುಲೆ ಅವರನ್ನು ನೆನೆಯೋಣ.

## ನಾಲುದ್ದದ ಸುದ್ದಿಗಳು



- ಲೆಫ್ಟಿಲೆಂಟ್ ಎಂ.ಎಸ್. ಕೊಹ್ಲಿ ನೇತೃತ್ವದ ತಂಡ ಎವರೆಸ್ಟ್ ಶಿಖರವನ್ನು ಏರಿ 50 ವರ್ಷ ಸಂದ ಹಿನ್ನೆಲೆಯಲ್ಲಿ ಸ್ವರ್ಣ ಮಹೋತ್ಸವನ್ನು ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಏ.4ರಂದು ಸೇನಾ ತಂಡ ಇನ್ನೊಮ್ಮೆ ಎವರೆಸ್ಟ್ ಶಿಖರವನ್ನು ಏರಲಿದ್ದು, ಸ್ವಚ್ಛತಾ ಅಭಿಯಾನ ಕೈಗೊಳ್ಳಲಿದೆ. ಎವರೆಸ್ಟ್ ಸ್ವಚ್ಛತಾ ಕಾರ್ಯಕ್ಕೆ 30 ದಿನಗಳನ್ನು ಮೀಸಲಿಡಲಾಗಿದ್ದು, ತಂಡದ ಸದಸ್ಯರು ಎವರೆಸ್ಟ್‌ನಲ್ಲಿರುವ ಅಜೈವಿಕ (ಪ್ಲಾಸ್ಟಿಕ್) ತ್ಯಾಜ್ಯಗಳನ್ನು ಸಂಗ್ರಹಿಸಿ ಕೆಳಕ್ಕೆ ತರಲಿದ್ದಾರೆ.



- ಹರ್ಯಾಣದ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಸೈನಾ ಸೆಹವಾಲ್ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ವಿಶ್ವ ಕ್ರಮಾಂಕ ಪಟ್ಟಿಯಲ್ಲಿ ಅಗ್ರ ಸ್ಥಾನಕ್ಕೆರಿದ್ದಾರೆ. ಮಾರ್ಚ್ 28ರಂದು ನವದೆಹಲಿಯಲ್ಲಿ ನಡೆದ ಇಂಡಿಯಾ ಸೂಪರ್ ಸೀರೀಸ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಜಪಾನ್‌ನ ಯುಯ್ ಹಶಿಮೊಟೊವನ್ನು ನೇರ ಸೆಟ್‌ಗಳಿಂದ ಸೂಲಿಸುವ ಮೂಲಕ ಸೈನಾ ಈ ಸಾಧನೆ ಮಾಡಿದ್ದಾರೆ. ಈ ಮೂಲಕ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಅಗ್ರಸ್ಥಾನಕ್ಕೇರಿದ ಭಾರತದ ಮೊದಲ ಆಟಗಾರ್ತಿ ಎಂಬ ಖ್ಯಾತಿಗೆ ಸೈನಾ ನೆಹವಾಲ್ ಪ್ರಾಪ್ತರಾಗಿದ್ದಾರೆ.

- **ಪ್ರತೀ ಕುಟುಂಬಕ್ಕೂ ವರ್ಷಕ್ಕೆ 12 ಎಲ್.ಪಿ.ಜಿ. ಸಿಲಿಂಡರ್ ಹಾಗೂ ಸರ್ಕಾರದ ಸಹಾಯಧನ (ಸಬ್ಸಿಡಿ) ನೀಡುತ್ತಿರುವುದು ನಮಗೆಲ್ಲ ತಿಳಿದಿದೆ. ನಮ್ಮ ಮನೆಯಲ್ಲಿ ಎಲ್.ಪಿ.ಜಿ. ಸಿಲಿಂಡರ್ ಬಳಸುತ್ತಿದ್ದಲ್ಲಿ ಅದನ್ನು ಕಾಯ್ದಿರಿಸುವ ಹೊತ್ತಿಗೇ ನಮ್ಮ ಬ್ಯಾಂಕ್‌ನ ಉಳಿತಾಯ ಖಾತೆಗೆ ಹಣ ಜಮಾ ಆಗುತ್ತಿದೆ. ಈ ವಿಷಯವಾಗಿ ವಿತ್ತ ಸಚಿವ ಅರುಣ್ ಜೈಟ್ಲಿ ಹಾಗೂ ಪೆಟ್ರೋಲ್ ಖಾತೆ ಸಚಿವ ಪೀಯೂಶ್ ಗೋಯಲ್ ಸಾಕಷ್ಟು ಬಾರಿ ಸಮಾಜದಲ್ಲಿನ ಉನ್ನತ ದರ್ಜೆಯಲ್ಲಿರುವ ಜನರಲ್ಲಿ ಸಬ್ಸಿಡಿಯನ್ನು ನಿರಾಕರಿಸಿ ಪೂರ್ಣ ಪ್ರಮಾಣದ ಬೆಲೆ ತೆತ್ತು ಎಲ್.ಪಿ.ಜಿ ಕೊಳ್ಳುವಂತೆ ಮನವಿ ಮಾಡಿದ್ದರು. ಈ ವಿಷಯವಾಗಿ ಪ್ರಧಾನಿ ನರೇಂದ್ರ ಮೋದಿಯವರೂ ಮನವಿ ಮಾಡಿ ಬಡವರಿಗೆ ಸಹಾಯವಾಗುವುದರಿಂದ ಎಲ್.ಪಿ.ಜಿ. ಸಬ್ಸಿಡಿಯನ್ನು ನಿರಾಕರಿಸುವಂತೆ ಕೇಳಿಕೊಂಡಿದ್ದರು. ಇದರ ಫಲಶ್ರುತಿಯಾಗಿ ಇದುವರೆಗೂ ಸುಮಾರು 2.8 ಲಕ್ಷ ಜನ ಸ್ವಯಂಪ್ರೇರಿತರಾಗಿ ಸಬ್ಸಿಡಿ ನಿರಾಕರಿಸಿದ್ದಾರೆ. ಹೀಗೆ ನಿರಾಕರಿಸಿದ ಸಬ್ಸಿಡಿಯಿಂದ ಸರಕಾರಕ್ಕೆ 100 ಕೋಟಿ ಉಳಿತಾಯವಾಗಿದೆ ಎಂದು ಸರಕಾರೀ ಮೂಲಗಳು ತಿಳಿಸಿವೆ.**






- **ಶಾಲಾ ವಿದ್ಯಾರ್ಥಿಗಳಿಗಾಗಿ ಇಸ್ಕಾನ್ ಏರ್ಪಡಿಸಿದ್ದ ಭಗವದ್ಗೀತೆ ಸ್ಪರ್ಧೆಯಲ್ಲಿ 12 ವರ್ಷದ ಮುಸ್ಲಿಂ ಬಾಲಕಿ ಮರಿಯಮ್ ಆಸೀಫ್ ಸಿದ್ಧಿಕಿ ಮೊದಲ ಸ್ಥಾನ ಗಳಿಸಿದ್ದಾಳೆ. ಮುಂಬೈ ಮೀರಾ ರಸ್ತೆಯಲ್ಲಿರುವ ಕಾಸ್ಮೋಪಾಲಿಟನ್ ಪ್ರೌಢಶಾಲೆಯಲ್ಲಿ ಆರನೇ ತರಗತಿ ವಿದ್ಯಾರ್ಥಿನಿಯಾಗಿರುವ ಮರಿಯಮ್ ಅಂತರ್‌ಶಾಲಾ ಮಟ್ಟದ ಭಗವದ್ಗೀತೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ 195 ಶಾಲೆಗಳ 4,500 ವಿದ್ಯಾರ್ಥಿಗಳನ್ನು ಹಿಂದಿಕ್ಕಿ ಮೊದಲ ಸ್ಥಾನ ಪಡೆದಿದ್ದಾಳೆ.**

- ತಂಬಾಕು ಉತ್ಪನ್ನಗಳ ಪೊಟ್ಟಣಗಳ ಮೇಲಿನ ಎಚ್ಚರಿಕೆ ಸಂದೇಶ ಹಾಗೂ ಚಿತ್ರಗಳ ಗಾತ್ರವನ್ನು ಶೇ. 60–65ಕ್ಕೆ ಹೆಚ್ಚಿಸಲು ಆರೋಗ್ಯ ಸಚಿವಾಲಯಕ್ಕೆ ಪ್ರಧಾನಿ ನರೇಂದ್ರ ಮೋದಿ ಸೂಚನೆ ನೀಡಿದ್ದಾರೆ. ತಂಬಾಕು ಉತ್ಪನ್ನಗಳು ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಕ್ಯಾನ್ಸರ್‌ನಂತಹ ಮಹಾಮಾರಿ ರೋಗಕ್ಕೆ ಕಾರಣವಾಗಬಹುದು ಎಂದು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ತಂಬಾಕು ಉತ್ಪನ್ನಗಳ ಮೇಲಿನ ಎಚ್ಚರಿಕೆ ಸಂದೇಶವನ್ನು ಈಗಿರುವ ಶೇ. 40ರಿಂದ ಹೆಚ್ಚಿಸಲು ನಿರ್ಧರಿಸಲಾಗಿದೆ.

पुंगव PUNGAVA

# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT PSO BENGALURU-560 026 on 10/25 of every Month REG.NO.CPMG/KA/BGS/102/2015-17

15-4-2015



# 2050ಕ್ಕೆ ವಿಶ್ವದ ಅತೀಹೆಚ್ಚು ಮುಸ್ಲಿಂ ಜನಸಂಖ್ಯೆ ಹೊಂದಿರುವ ದೇಶ ಭಾರತ!

ಮುಸ್ಲಿಂ ಜನಸಂಖ್ಯೆಯಲ್ಲಿ 2050ರ ವೇಳೆಗೆ ಭಾರತ ಇಂಡೋನೇಷಿಯಾವನ್ನು ಮೀರಿಸಲಿದೆ. ತನ್ಮೂಲಕ ಭಾರತ ಜಗತ್ತಿನ ಅತೀ ಹೆಚ್ಚು ಮುಸ್ಲಿಂ ಜನಸಂಖ್ಯೆಯನ್ನು ಹೊಂದಿದ ದೇಶವಾಗಲಿದೆ ಎಂದು ನೂತನ ಅಧ್ಯಯನವೊಂದು ತಿಳಿಸಿದೆ.



ಅಮೆರಿಕ ಮೂಲದ ಪ್ಯೂ ರಿಸರ್ಚ್ ಸೆಂಟರ್ ನಡೆಸಿದ ಧಾರ್ಮಿಕ ಅಧ್ಯಯನದಿಂದ ಈ ಮಾಹಿತಿ ಬಯಲಾಗಿದೆ. ವಿಶ್ವದ ಒಟ್ಟಾರೆ ಜನಸಂಖ್ಯಾ ಬೆಳವಣಿಗೆಗಿಂತಲೂ ಮುಸ್ಲಿಮರ ಸಂಖ್ಯೆ ವೇಗವಾಗಿ ಬೆಳೆಯುತ್ತಿದ್ದು, ಹಿಂದು ಮತ್ತು ಕ್ರಿಶ್ಚಿಯನ್ ಜನಸಂಖ್ಯೆ ಮಂದಗತಿಯಲ್ಲಿ ಬೆಳೆಯುತ್ತಿರುವುದೇ ಇದಕ್ಕೆ ಕಾರಣ ಎನ್ನಲಾಗಿದೆ. ಆದರೆ ಭಾರತ ಹಿಂದೂ ಬಹುಸಂಖ್ಯಾತ ರಾಷ್ಟ್ರವಾಗಿಯೇ ಮುಂದುವರಿಯಲಿದೆ. ಹಾಗೂ 2050ರ ವೇಳೆಗೆ ಹಿಂದೂಗಳು ಜಗತ್ತಿನ 3ನೇ ಅತಿದೊಡ್ಡ ಜನಸಂಖ್ಯೆಯನ್ನು ಹೊಂದಲಿದ್ದಾರೆ ಎಂದು ಅದು ತಿಳಿಸಿದೆ. ಆದರೆ ಒಟ್ಟು ಜನಸಂಖ್ಯೆ ಪ್ರಮಾಣದಲ್ಲಿ ಹಿಂದುಗಳ ಸಂಖ್ಯೆ ಶೇ. 0.1ರಷ್ಟು ಕುಸಿತ ಕಾಣಲಿದೆ ಎನ್ನಲಾಗಿದೆ.

2050ರ ವೇಳೆಗೆ ಹಿಂದುಗಳ ಜನಸಂಖ್ಯೆ ಜಗತ್ತಿನಾದ್ಯಂತ ಶೇ. 34ರಷ್ಟು ಏರಿಕೆಯಾಗಲಿದ್ದು, ಪ್ರಸ್ತುತ ಇರುವ 1 ಬಿಲಿಯನ್‌ನಿಂದ 1.4 ಬಿಲಿಯನ್‌ಗೆ ಅಂದರೆ 138 ಕೋಟಿಗೆ ಏರಿಕೆಯಾಗಲಿದೆ. ಪ್ರಸ್ತುತ ಯಾವ ಧರ್ಮಕ್ಕೂ ಸೇರದ (ನಾಸ್ತಿಕ)ದವರ ಜನಸಂಖ್ಯೆ 3ನೇ ಸ್ಥಾನದಲ್ಲಿತ್ತು. 2050ರಲ್ಲಿ ಇವರ ಜನಸಂಖ್ಯೆಯನ್ನು ಹಿಂದೂಗಳು ಮೀರಿಸಲಿದ್ದಾರೆ. ಪ್ರಸ್ತುತ 2050ರಲ್ಲಿ ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಶೇ. 14.9 ರಷ್ಟು ಹಿಂದೂಗಳಿರಲಿದ್ದಾರೆ, 13.2ರಷ್ಟು ನಾಸ್ತಿಕರಿರಲಿದ್ದಾರೆ. ಮುಂದಿನ ಹಲವು ವರ್ಷದವರೆಗೂ ಜಗತ್ತಿನ ಜನಸಂಖ್ಯೆಯಲ್ಲಿ ಕ್ರಿಶ್ಚಿಯನ್ನರು ಮೊದಲ ಸ್ಥಾನದಲ್ಲಿರಲಿದ್ದಾರೆ. ಆದರೆ ಮುಸ್ಲಿಂ ಜನಸಂಖ್ಯೆಯ ಇತರ ಎಲ್ಲಾ ಧರ್ಮಿಯರಿಗಿಂತಲೂ ಶೀಘ್ರಗತಿಯಲ್ಲಿ ಏರುತ್ತಿದೆ. 2050ರಲ್ಲಿ ಕ್ರಿಶ್ಚಿಯನ್ ಜನಸಂಖ್ಯೆಯ ಹತ್ತಿರಕ್ಕೆ ಮುಸ್ಲಿಮರು ಬರಲಿದ್ದಾರೆ ಎಂದು ವರದಿಯಲ್ಲಿ ತಿಳಿಸಿದೆ.

**ಜನಸಂಖ್ಯೆ ಆಧಾರದಲ್ಲಿ ಲೆಕ್ಕಾಚಾರ**

| ಧರ್ಮ | 2010ರಲ್ಲಿ (ಕೋಟಿಗಳಲ್ಲಿ) | ಶೇ. | 2050ರಲ್ಲಿ (ಕೋಟಿಗಳಲ್ಲಿ) | ಶೇ |
|---|---|---|---|---|
| ಕ್ರೈಸ್ತ | 216 | 31.4 | 291 | 31.4 |
| ಮುಸ್ಲಿಮ್ | 159 | 23.2 | 276 | 29.7 |
| ನಾಸ್ತಿಕ | 113 | 16.4 | 123 | 13.2 |
| ಹಿಂದು | 103 | 15.0 | 138 | 14.9 |
| ಬೌದ್ಧ | 48.7 | 7.1 | 48.6 | 5.2 |
| ಬುಡಕಟ್ಟು | 40.4 | 5.9 | 44.9 | 4.8 |
| ಇತರ ಧರ್ಮ | 5.8 | 0.8 | 6.1 | 0.7 |
| ಜ್ಯೂ | 1.3 | 0.2 | 1.6 | 0.2 |
| ಒಟ್ಟು | 689.58 | 100 | 930.71 | 100 |

## ಬೆಂಗಳೂರಿನ ಪೇಪರ್ ಹುಡುಗ ಶಿವಕುಮಾರ್‌ನ ಎಂ.ಬಿ.ಎ ಯಶೋಗಾಥೆ!

ಬೆಂಗಳೂರಿನಲ್ಲಿ ಪ್ರತಿದಿನ ಪತ್ರಿಕೆ ಮಾರಾಟ ಮಾಡಿ ಜೀವನ ನಡೆಸುತ್ತಿದ್ದ ಶಿವಕುಮಾರ್ ಇಂದು ಕೋಲ್ಕತ್ತಾದಲ್ಲಿರುವ ಪ್ರತಿಷ್ಠಿತ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐ.ಐ.ಎಂ.)ನಿಂದ ಎಂ.ಬಿ.ಎ ಪದವಿ ಪಡೆದು ಶ್ರೀಲಂಕಾದಲ್ಲಿರುವ ಜರ್ಮನಿ ಮೂಲದ ಕಂಪನಿಯೊಂದರ ಉಪ-ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದಿನನಿತ್ಯದ ಹೊಟ್ಟೆತುಂಬಿಸಿಕೊಳ್ಳಲೂ ಸಂಕಷ್ಟದಲ್ಲಿರುವ ಶಿವಕುಮಾರ್ ಪ್ರತಿನಿತ್ಯ ಬೆಳಗ್ಗೆ ಎದ್ದು ಮನೆಮನೆಗೆ ಪೇಪರ್ ಹಾಕುತ್ತಿದ್ದ. ಇದರ ನಡುವೆಯೂ ಓದು ಮುಂದುವರಿಸಿದ್ದ ಶಿವಕುಮಾರ್ 8ನೇ ತರಗತಿಯಲ್ಲಿದ್ದಾಗ ಒಂದು ದಿನ ಮುಂಜಾನೆ ಪತ್ರಿಕೆಯೊಂದನ್ನು ಕೊಂಡ ಕೃಷ್ಣ ವೇದವ್ಯಾಸರಲ್ಲಿ ತನ್ನ ಶಾಲಾ ಶುಲ್ಕವನ್ನು ಭರಿಸಲು ನೆರವಾಗುವಂತೆ ಕೋರಿದ. ಹುಡುಗನ ಹಿನ್ನೆಲೆ ಅರಿತು, ನೇರ ಶಾಲೆಗೆ ಬೇಟಿ ನೀಡಿ ಪರಿಸ್ಥಿತಿಯನ್ನು ಅರಿತ ಕೃಷ್ಣ ವೇದವ್ಯಾಸರು ಶಿವಕುಮಾರ್ ಅವರಿಗೆ ನೆರವು ನೀಡಿದರು. ಮಾತ್ರವಲ್ಲದೇ ಅಂದಿನಿಂದ ಶಿವಕುಮಾರನ ವಿದ್ಯಾಭ್ಯಾಸದ ಸಂಪೂರ್ಣ ಹೊಣೆಗಾರಿಕೆಯನ್ನು ಹೊತ್ತು ಅವನ ಅಗತ್ಯಗಳನ್ನು ಪೂರೈಸಿದರು. ಕೇವಲ ಪತ್ರಿಕೆ ಮಾರಾಟವಷ್ಟೆ ಅಲ್ಲದೆ, ಕುಟುಂಬದ ಆದಾಯ ವೃದ್ಧಿಗಾಗಿ ಹೂ-ಮಾರಾಟ, ಕಾರು ತೊಳೆಯುವುದು, ಕಾರಿನ ಮಾರಾಟ ಮಳಿಗೆಗಳಲ್ಲಿ ಮಾರಾಟ ಪ್ರತಿನಿಧಿಯಾಗಿ ಉದ್ಯೋಗ – ಹೀಗೆ ಹಲವು ಕೆಲಸಗಳನ್ನು ಮಾಡುತ್ತಿದ್ದ ಈ ವಿಶಿಷ್ಟ ಸಾಧಕ ಶಿವಕುಮಾರ್ ಶಿಕ್ಷಣದಲ್ಲಿ ಎಂದೂ ಹಿಂದೆ ಬಿದ್ದವರಲ್ಲ. ಮಾರುತಿ ವಿದ್ಯಾಲಯದಲ್ಲಿ ಶಾಲಾ ಶಿಕ್ಷಣ ಮುಗಿಸಿದ ಶಿವಕುಮಾರ್, ಇಂಜಿನಿಯರಿಂಗ್ ಪದವಿ ಪಡೆದಿದ್ದು ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ. ವೇದವ್ಯಾಸರ ನೆರವನ್ನು ಸದುಪಯೋಗಪಡಿಸಿಕೊಂಡು ನಿರಂತರ ಅಧ್ಯಯನ ನಡೆಸಿದ ಶಿವಕುಮಾರ್ ಇದೀಗ ಉನ್ನತ ಹುದ್ದೆಗೆ ತಲಪಿದ್ದಾರೆ. ಸರಸ್ವತಿ ಸಾಧಕರ ಹೆಗಲನ್ನೇರುವವಳು. ಅವಳಿಗೆ ಲಕ್ಷ್ಮಿಯ ಹಂಗಿಲ್ಲ ಎಂಬುವುದಕ್ಕೆ ಶಿವಕುಮಾರ್ ಸಾಕ್ಷಿ.

## ಸರಸ್ವತಿ ನದಿಯ ಉತ್ಖನನ ಆರಂಭ

ಪೌರಾಣಿಕ ಸರಸ್ವತಿ ನದಿ ಹುಟ್ಟಿದ ಜಾಗವೆಂದು ಹೇಳಲಾಗುವ ಹರ್ಯಾಣದ ಆದಿಬದರಿಯಲ್ಲಿ ಉತ್ಖನನ ಪ್ರಾರಂಭಿಸಲು ಹರ್ಯಾಣ ಸರ್ಕಾರ ನಿರ್ಧರಿಸಿದೆ. ಸ್ಥಳದ ಪ್ರಾಮುಖ್ಯತೆಯನ್ನು ಗಮನದಲ್ಲಿರಿಸಿಕೊಂಡು ರಾಜ್ಯಸರ್ಕಾರ 'ಆದಿ ಬದ್ರಿ ಹೆರಿಟೇಜ್ ಬೋರ್ಡ್' ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಿದೆ ಎಂದು ಹರ್ಯಾಣದ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ತಿಳಿಸಿದ್ದಾರೆ. ಯಮುನಾನಗರ ಜಿಲ್ಲೆಯ ಸಾರ್ವಜನಿಕ ಸಭೆಯಲ್ಲಿ ಈ ಪ್ರದೇಶದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಯೋಜನೆಗಳ ಕುರಿತು ಮಾತನಾಡುತ್ತಾ ಉತ್ಖನನವನ್ನು ಪ್ರಾರಂಭಿಸುವುದಾಗಿ ಘೋಷಿಸಿದರು. ಕಳೆದ ಅಕ್ಟೋಬರ್‌ನಲ್ಲಿ ಆಧಿಕಾರದ ಚುಕ್ಕಾಣಿ ಹಿಡಿದ ದಿನದಿಂದಲೂ ಹರ್ಯಾಣದ ಬಿ.ಜೆ.ಪಿ. ಸರ್ಕಾರ ಹಿಂದುಸಂಸ್ಕೃತಿಗೆ ಸಂಬಂಧಿಸಿದ ಪ್ರಮುಖ ಸ್ಥಳಗಳ ಅಭಿವೃದ್ಧಿ ಹಾಗೂ ರಕ್ಷಣೆಗೆ ಸಾಕಷ್ಟು ಮಹತ್ವ ನೀಡಿದೆ. ಹಿಂದಿನ ಫೆಬ್ರವರಿಯಲ್ಲಿ, ಅರಣ್ಯ ಇಲಾಖೆ ಆದಿ ಬದ್ರಿ ಪ್ರದೇಶದ ಶಿವಾಲಿಕ್ ಬೆಟ್ಟದ ತಪ್ಪಲಿನಲ್ಲಿರುವ ಸರಸ್ವತಿ ಉಗಮ ಸ್ಥಳದಲ್ಲಿ ನೀರಿನ ಮೂಲಗಳಿಂದ ತೊರೆಯನ್ನು ನಿರ್ಮಿಸಿ ಸರಸ್ವತಿ ನದಿಯನ್ನು ಪುನರುಜ್ಜೀವಗೊಳಿಸುವ ಕೆಲಸವನ್ನು ಆರಂಭಿಸಿತ್ತು. ಅಲಹಾಬಾದ್‌ವರೆಗೂ ಹರಿಯುತ್ತಿತ್ತು ಎನ್ನಲಾಗುವ ಸರಸ್ವತಿ ನದಿಯ ಮೂಲ ದಾರಿ ಮತ್ತು ಅಲ್ಲಿ ನೀರಿನ ಕಾಲುವೆಯನ್ನು ಮರುನಿರ್ಮಿಸುವ ಮಾರ್ಗವನ್ನು ಕಂಡುಕೊಳ್ಳುವ ಉದ್ದೇಶದಿಂದ ಉಗಮ ಸ್ಥಳ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಇಲಾಖೆಯ ಅಧಿಕಾರಿಗಳು ಭೇಟಿನೀಡಿ ಪರಿಶೀಲನೆ ನಡೆಸಿದ್ದಾರೆ. ಕೆಲ ಸಂಶೋಧನೆಗಳ ಪ್ರಕಾರ ಭೂಮಿಯ ಒಳಗೆ ಇಂದಿಗೂ ಸರಸ್ವತಿ ನದಿ ಹರಿಯುತ್ತಿದೆ ಹಾಗೂ ಕೃತಕ ಉಪಗ್ರಹಗಳಿಂದ ದೊರೆತಿರುವ ಚಿತ್ರಗಳೂ ಇಂತಹ ನದಿಯ ಅಸ್ತಿತ್ವವನ್ನು ಸಾಬೀತುಪಡಿಸಿದೆ ಎನ್ನಲಾಗಿದೆ.



## ಕೊಯಿಲ ಗ್ರಾ.ಪಂ.ಗೆ ರಾಷ್ಟ್ರ ಪ್ರಶಸ್ತಿ

ನಿರ್ಮಲ ಗ್ರಾಮ ಪ್ರಶಸ್ತಿ ಪಡೆದುಕೊಂಡಿದ್ದ ಪುತ್ತೂರು ತಾಲ್ಲೂಕಿನ ಕೊಯಿಲ ಗ್ರಾಮ ಪಂಚಾಯಿತಿ ಇದೀಗ ರಾಜೀವ್ ಗಾಂಧಿ ಸಶಕ್ತೀಕರಣ ರಾಷ್ಟ್ರ ಪ್ರಶಸ್ತಿಗೆ ಆಯ್ಕೆಯಾಗಿದೆ. ಪಂಚಾಯತ್ ರಾಜ್ ದಿನವಾದ ಏಪ್ರಿಲ್ 24ರಂದು ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕೊಯಿಲ ಗ್ರಾ.ಪಂ. ಸರ್ಕಾರದ ಅನುದಾನಗಳ ಸದ್ಬಳಕೆ, ಮಹಿಳೆಯರು, ಮಕ್ಕಳು, ಅಂಗವಿಕಲರ ಬಗ್ಗೆ ಹಾಕಿಕೊಂಡ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನ, ಮಕ್ಕಳ ಪೌಷ್ಟಿಕಾಂಶ, ಸ್ವಚ್ಛತೆ ವಿಚಾರದಲ್ಲಿ ಪಂಚಾಯಿತಿ ಮಾಡಿರುವ ಗಣನೀಯ ಸಾಧನೆಯನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆಯಾಗಿದೆ. ರಾಜ್ಯದ 4 ಗ್ರಾ. ಪಂ.ಗಳು ಈ ಪ್ರಶಸ್ತಿಗೆ ಆಯ್ಕೆಯಾಗಿವೆ.



## ದೇಶಾದ್ಯಂತ ಗೋಹತ್ಯೆ ನಿಷೇಧಕ್ಕೆ ಚಿಂತನೆ



ಬಿಜೆಪಿ ಅಧಿಕಾರದ ಮಧ್ಯಪ್ರದೇಶ, ಝಾಖಂಡ್ ಹಾಗೂ ಮಹಾರಾಷ್ಟ್ರದಲ್ಲಿ ಈಗಾಗಲೇ ಗೋಹತ್ಯೆ ನಿಷೇಧ ಕಾನೂನನ್ನು ಜಾರಿಗೆ ತರಲಾಗಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರದ ಬದ್ಧತೆಯನ್ನು ಯಾರೂ ಅನುಮಾನಿಸಬೇಕಾದ ಅಗತ್ಯವಿಲ್ಲ. ದೇಶದಾದ್ಯಂತ ಒಮ್ಮತದ ಮೂಲಕ ಗೋ ಹತ್ಯೆ ನಿಷೇಧಕ್ಕೆ ಕೇಂದ್ರ ಸರ್ಕಾರ ಪ್ರಯತ್ನ ಮಾಡಲಿದೆ ಎಂದು ಗೃಹ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಗೋ ಹತ್ಯೆ ಮಾಡುವವರನ್ನು ಈ ದೇಶದಲ್ಲಿ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಶ್ವೇತಾಂಬರ ಜೈನ ಪಂಥದ ಧಾರ್ಮಿಕ ಮುಖಂಡರ ಸಮಾವೇಶದಲ್ಲಿ ಅವರು ತಿಳಿಸಿದರು.

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : 9731264009 ಪ್ರಸರಣ: 97391 83021 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19